ಸಾರಿಗೆ ಸಂಸ್ಥೆಯಲ್ಲಿ ವಿಭಾಗ ನಿಯಂತ್ರಣಾಧಿಕಾರಿ ಹುದ್ದೆಗೆ ಬಡ್ತಿ

364 - ಶ್ರೀ ಕೆ. ಲಕ್ಷ್ಮಣ್ಣ (ರಾಜಾಜಿನಗರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಾರಿಗೆ ಸಂಸ್ಥೆಯಲ್ಲಿ ಡಿಪ್ಲೋಮಾ ಮಾಡಿದವರಿಗೆ ಕ್ಲಾಸ್ -1 ಸೀನಿಯರ್ ಸ್ಕೇಲ್ ಹುದ್ದೆಯಾದ ವಿಭಾಗ ನಿಯಂತ್ರಣಾಧಿಕಾರಿ ಹುದ್ದೆಗೆ ಬಡ್ತಿ ನೀಡಿರುವುದು ನಿಜವೇ?

ಆ) ಹಾಗಿದ್ದಲ್ಲಿ ವೃಂದ ಮತ್ತು ನೇಮಕಾತಿ ನಿಯಮವನ್ನು ಅನುಸರಿಸಿ ನೀಡಲಾಗಿದೆಯೇ?

ಇ) ಇದೇ ಹುದ್ದೆಗೆ ಬಿ.ಇ. (ಮೆಕ್ಯಾನಿಕಲ್) ಪದವೀಧರರಿಗೆ ಬಡ್ತಿ ನೀಡಲು ಅನುಸರಿಸುವ ನಿಯಮ ಯಾವುದು?

ಈ) ಸದರಿ ಬಡ್ತಿಯನ್ನು ಜೇಷ್ಠತಾ ಪಟ್ಟಿಗನುಗುಣವಾಗಿ ನೀಡಲಾಗಿದೆಯೇ ಹಾಗಿಲ್ಲದಿದ್ದಲ್ಲಿ ತಪ್ಪಿತಸ್ಥರ ಮೇಲೆ ಕೈಗೊಂಡ ಕ್ರಮವೇನು?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಮಂತ್ರಿಗಳು) :

ಅ) ಇಲ್ಲ

ಆ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ (ಪದವ್ಯಂದ ಮತ್ತು ನೇಮಕಾತಿ) ನಿಯಮಾವಳಿ 1982ನ್ನು ಅನುಸರಿಸಿ ಬಡ್ತಿ ನೀಡಲಾಗಿದೆ

ಇ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಪದವ್ಯಂದ ಮತ್ತು ನೇಮಕಾತಿ ನಿಯಮಾವಳಿ 1982ರ ಪ್ರಕಾರವೇ ಪರಿಗಣಿಸಲಾಗುವುದು.

ಈ) ವಿಭಾಗ ನಿಯಂತ್ರಣಾಧಿಕಾರಿಗಳ ಹುದ್ದೆಗಳು ದರ್ಜೆ-1(ಹಿರಿಯ) ಹುದ್ದೆಗಳಾಗಿದ್ದು ದರ್ಜೆ -1 (ಕಿರಿಯ) ಅಧಿಕಾರಿಗಳನ್ನು ಜೇಷ್ಠತೆ ಹಾಗೂ ಆಯ್ಕೆ ಆಧಾರದ ಮೇಲೆ ಪರಿಗಣಿಸಿ ಬಡ್ತಿ ನೀಡಿ ಹುದ್ದೆಗಳನ್ನು ತುಂಬಿರುವುದರಿಂದ ಯಾವುದೇ ತಪ್ಪು ಉಂಟಾಗಿರುವುದಿಲ್ಲ. ಆದುದರಿಂದ, ಯಾವುದೇ ಶಿಸ್ತು ಕ್ರಮ ತೆಗೆದುಕೊಳ್ಳುವ ಪ್ರಮೇಯವಿರುವುದಿಲ್ಲ.

ನದಿಗಳಲ್ಲಿ ಮಾಲಿನ್ಯಕ್ಕೆ ಕಾರಣರಾದವರ ಮೇಲೆ ಕ್ರಮ

578 - ಶ್ರೀ ಸಿ. ಬೈರೇಗೌಡ (ವೇಮಗಲ್) : ಮಾನ್ಯ ಪರಿಸರ ಮತ್ತು ಜೀವಿಶಾಸ್ತ್ರ ಹಾಗೂ ವಿಜ್ಞಾನ ಮತ್ತು ಯಂತ್ರಕಲಾ ಮತ್ತು ಮಲೆನಾಡು ಅಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಯಾವ ಯಾವ ನಗರಗಳಲ್ಲಿ ಮತ್ತು ನದಿಗಳಲ್ಲಿ ವಿವಿಧ ಬಗೆಯ ಮಾಲಿನ್ಯವುಂಟಾಗಿರುವುದು. ಮಾಲಿನ್ಯಕ್ಕೆ ಕಾರಣರಾದವರಲ್ಲಿ ಯಾರ ಯಾರ ಮೇಲೆ ಕಾನೂನು ಕ್ರಮ ಜರುಗಿಸಲಾಗಿದೆ?

ಆ) ಅನೇಕ ವಾಹನಗಳಲ್ಲಿ 'ಏರ್ ಹಾರನ್' ಗಳನ್ನು ಹಾಕಿ ಶಬ್ದ ಮಾಲಿನ್ಯವುಂಟಾಗುತ್ತಿದ್ದರೂ ಇವುಗಳನ್ನು ನಿಷೇದಿಸದೆ ಇರುವುದಕ್ಕೆ ಕಾರಣವೇನು?

ಡಾ|| ಎಚ್.ಆರ್. ರಾಜು (ವಿಜ್ಞಾನ, ಯಂತ್ರಕಲಾ, ಪರಿಸರ ಮತ್ತು ಜೀವಿಶಾಸ್ತ್ರ ಹಾಗೂ ಮಲೆನಾಡು ಅಭಿವೃದ್ಧಿ ಮಂಡಳಿ ರಾಜ್ಯ ಸಚಿವರು) :

ಅ) ನಗರಗಳು ಹಾಗೂ ನದಿಗಳಲ್ಲಿ ಉಂಟಾಗುವ ಮಾಲಿನ್ಯವೆಂದರೆ ಜಲ ಮಾಲಿನ್ಯ ವಾಯು ಮಾಲಿನ್ಯ ಹಾಗೂ ಶಬ್ದ ಮಾಲಿನ್ಯ.

ನಗರಗಳಲ್ಲಿ ಜಲ ಮಾಲಿನ್ಯವು ಕಾರ್ಖಾನೆಗಳಿಂದ ಹೊರಬರುವ ಕಲ್ಮಷ ನೀರು ಹಾಗೂ ಗೃಹ ಬಳಕೆಯಿಂದ ಹೊರ ಬರುವ ಕೊಳಚೆ ನೀರಿನಿಂದ ಉಂಟಾಗುತ್ತದೆ.

ನಗರಗಳಲ್ಲಿ ವಾಯು ಮಾಲಿನ್ಯವು ಬಹುತೇಕವಾಹನಗಳಿಂದ ಉಂಟಾಗುತ್ತದೆ ಹಾಗೂ ಸ್ವಲ್ಪ ಮಟ್ಟಿಗೆ ಕೈಗಾರಿಕೆಗಳಿಂದ ಉಂಟಾಗುತ್ತದೆ. ವಾಹನಗಳಿಂದ ಉಂಟಾಗುವ ವಾಯು ಮಾಲಿನ್ಯವನ್ನು ತಡೆಯಲು ಅಧಿಕಾರವು ಪೋಲೀಸ್ ಹಾಗೂ ಸಾರಿಗೆ ಇಲಾಖೆಗಳಿಗೆ ವಹಿಸಲ್ಪಟ್ಟಿದೆ. ಕೈಗಾರಿಕೆಗಳಿಂದ ಉಂಟಾಗುವ ವಾಯು ಹಾಗೂ ಶಬ್ದ ಮಾಲಿನ್ಯವನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಮಾಪನ ಮಾಡುತ್ತಿದೆ. ವಾಹನಗಳ ಹಾರನ್, ಧ್ವನಿವರ್ಧಕ ಮುಂತಾದವುಗಳಿಂದ ಉಂಟಾಗುವ ಶಬ್ದ ಮಾಲಿನ್ಯವನ್ನು ತಡೆಯುವ ಹೊಣೆಗಾರಿಕೆ ಪೋಲೀಸ್ ಇಲಾಖೆಯದ್ದಾಗಿರುತ್ತದೆ.

ನದಿಗಳ ಮಾಲಿನ್ಯಕ್ಕೆ ಪಟ್ಟಣ ಪ್ರದೇಶಗಳ ಕೊಳಚೆ, ನೀರು ಹಾಗೂ ಕಾರ್ಖಾನೆಗಳು ಹೊರಬಿಡುವ ಕಲುಷಿತ ನೀರು ಸೇರುವುದು ಕಾರಣವಾಗಿದೆ. ಕೊಳಚೆ ನೀರನ್ನು ಶುದ್ಧೀಕರಿಸಿ ಬಿಡಲು ವಿಫಲವಾಗಿರುವ ಭದ್ರಾವತಿ ಮತ್ತು ಮಂಗಳೂರು ನಗರ ಪಾಲಿಕೆಗಳ ವಿರುದ್ಧ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಲಾಗಿದೆ.

ಆ) ಕೇಂದ್ರ ಮೋಟಾರು ವಾಹನ ಕಾಯ್ದೆ 89ರ ನಿಯಮ 119ರ ಪ್ರಕಾರ ವಾಹನಗಳಿಗೆ ಅಳವಡಿಸಲಾದ ಹಾರ್ನ್‌ನ್ನು ಜಿರೋ ಆಫ್ ಇಂಡಿಯನ್ ಸ್ಟ್ಯಾಂಡರ್ಡ್ ಮಾನಕಕ್ಕೆ ಸರಿ ಹೊಂದುವಂತಿರಬೇಕು. ಈ ಹಾರ್ನ್‌ನಿಂದ ಹೊರಡುವ ಶಬ್ದವು ಕರ್ಕಷವಾಗಲಿ ಸೀಳು ಧ್ವನಿಯಲ್ಲಿ ಹೊರಡಿಸಬಾರದು. ಈ ನಿಯಮವನ್ನು ಉಲ್ಲಂಘಿಸಿದ ವಾಹನ ಚಾಲಕರ ಮೇಲೆ ಮೊದಲ ಅಪರಾಧಕ್ಕೆ ರೂ. 1,000-00ಗಳು ಹಾಗೂ ತದನಂತರ ಅಪರಾಧಕ್ಕೆ ರೂ. 2,000-00ಗಳು ದಂಡವನ್ನು ವಿಧಿಸುವ ಅವಕಾಶವನ್ನು ಮೇಲಿನ ಮೋಟಾರು ಕಾಯ್ದೆ ನಿಯಮ 190 (2)ರ ಪ್ರಕಾರ ಅವಕಾಶ ಮಾಡಲಾಗಿದೆ. ವಿವಿಧ ವರ್ಗಗಳ ಎಲ್ಲ ವಾಹನಗಳಿಗೆ ಸಮಾನಾಂತರ ಶಬ್ದವನ್ನು ಹೊರಡಿಸುವಂತೆ ಹಾರ್ನ್‌ನ್ನು ಅಳವಡಿಸುವುದು ಕಾರ್ಯರೂಪದಲ್ಲಿ ಸಾಧ್ಯವಾಗದ ಕಾರಣ ನಿರ್ದಿಷ್ಟ ನಿಯಮವನ್ನು ರೂಪಿಸುವುದು ಕಷ್ಟಸಾಧ್ಯವೆಂದು ಸಾರಿಗೆ ಇಲಾಖೆಯು ತಿಳಿಸಿದೆ.

ಮುಂಡರಗಿ ತಾಲ್ಲೂಕಿನಲ್ಲಿ ಪೋಲೀಸ್ ಸಿಬ್ಬಂದಿ ಬಗ್ಗೆ

479 - ಶ್ರೀ ಕೆ.ಹೆಚ್. ಕುರಡಗಿ (ಮುಂಡರಗಿ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಂಡರಗಿ ತಾಲ್ಲೂಕಿಗೆ ಪೋಲೀಸ್ ಸಿಬ್ಬಂದಿ ಕಡಿಮೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಹೆಚ್ಚಿನ ಸಿಬ್ಬಂದಿಯನ್ನು ಕೊಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಚೌಡರೆಡ್ಡಿ (ಗೃಹ ಸಚಿವರು) :

ಅ) ಮುಂಡರಗಿ ಪೋಲೀಸ್ ಠಾಣೆಯಲ್ಲಿ ಸಾಕಷ್ಟು ಪೋಲೀಸ್ ಸಿಬ್ಬಂದಿ ಇರುತ್ತದೆ.

ಆ) ಉದ್ಭವಿಸುವುದಿಲ್ಲ

ಮುಳುಗುಂದ ಪೋಲೀಸ್ ಠಾಣೆ ಸಿಬ್ಬಂದಿ ಕೊರತೆ

479 ಎ - ಶ್ರೀ ಕೆ.ಹೆಚ್. ಕುರಡಗಿ (ಮುಂಡರಗಿ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಳುಗುಂದ ಪೋಲೀಸ್ ಠಾಣೆಯಲ್ಲಿನ ಸಿಬ್ಬಂದಿಗೆ ಮುಳುಗುಂದದಲ್ಲಿ ಪೋಲೀಸ್ ಕ್ವಾರ್ಟರ್ಸ್ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಚೌಡರೆಡ್ಡಿ (ಗೃಹ ಸಚಿವರು) :